ಸಿ.ಸಿ ನಂಬ್ರ: 1270/2023
ಪಿ.ಡಬ್ಲ್ಯೂ :1

ದಿನಾಂಕಃ 17-06-2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಗಿದೆ

ಪಾಟೀ ಸವಾಲು : ಆರೋಪಿ ಪರ ಶ್ರೀ ಎಂ ಡಿ ಎಸ್ ವಕೀಲರಿಂದ

1. ದಿನಾಂಕ 05-07-2014 ರಲ್ಲಿ ಆರೋಪಿಗೆ ನೋಟಿಸು ಕೊಡಲಾಗಿರುತ್ತದೆ. ದಿನಾಂಕ 17-01-2025 ರಂದು ಹಾಜರು ಪಡಿಸಿದ ದಾಖಲೆಗಳ ಬಗ್ಗೆ ದಿನಾಂಕ 05-07-2014 ರ ನೋಟಿಸಿನಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿ. ಸದರಿ ದೂರನ್ನು ಯಾವಾ ದಿನಾಂಕದಂದು ನಮೂದಿಸಿರುತ್ತೇನೆ ಎಂದು ಗೊತ್ತಿರುವುದಿಲ್ಲ. ದೂರಿನಲ್ಲಿ ಸಹ ದಿನಾಂಕ 17-01-2025 ರಲ್ಲಿ ಹಾಜರು ಪಡಿಸಿದ ದಾಖಲೆಗಳ ಬಗ್ಗೆ ತಿಳಿಸಿಲ್ಲ ಎಂದರೆ ಸರಿ. ನಾವು ಹಾಜರು ಪಡಿಸಿದ ಯಾವ ದಾಖಲೆಯಲ್ಲಿ ಆರೋಪಿತನ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಕರಾರು ಪತ್ರ, ವಚನ ಪತ್ರ, ಚೆಕ್ ನಲ್ಲಿ, ದೃಢಪತ್ರಿಕೆಯಲ್ಲಿ ಸಹಿ ಇರುತ್ತದೆ.

2. ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆ ದಾಖಲೆಯಲ್ಲಿರುವ ಸಹಿಗಳು ಆರೋಪಿತನದ್ದಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಈ ಎಲ್ಲಾ ದಾಖಲೆಗಳನ್ನು ಅಡ್ಡ ವಿಚಾರಣೆ ಆದ ನಂತರ ಹಾಜರು ಪಡಿಸಲಾಗಿದೆ ಎಂದರೆ ಸರಿ. ಪ್ರಕರಣಕ್ಕೆ ಅನುಗುಣವಾಗಿ ಅಡ್ಡ ವಿಚಾರಣೆ ಆದ ನಂತರ ದಾಖಲೆಗಳನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ.
ಮರು ವಿಚಾರಣೆ - ಇಲ್ಲ.

ಓ.ಹೇ.ಕೇ.ಸ.ಇದೆ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಕುಂದಾಪುರ